**SC No. 45/2021**
**PW-38**

## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 45/2021**

| | | |
|---|---|---|
| ಸಾಕ್ಷಿದಾರರ ಹೆಸರು | ವಿಜಯ್ ಕುಮಾರ್ | ಪ್ರಮಾಣ ವಚನ ಮಾಡಿದ ದಿನಾಂಕ: 09.07.2026 |
| ತಂದೆಯ/ಗಂಡನ ಹೆಸರು | ರಾಜೇಗೌಡ | |
| ವಯಸ್ಸು | 64 ವರ್ಷ | |
| ವೃತ್ತಿ | ನಿವೃತ್ತ ಪೊಲೀಸ್ ಇನ್ಸ್‌ಪೆಕ್ಟರ್ | ಪ್ರಾ.ಸಾಃ 38 |
| ವಾಸ ಸ್ಥಳ | ಮೈಸೂರು | ಚಾ.ಸಾಃ 71 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಸರಸ್ವತಿ ಪುರಂ ಪೊಲೀಸ್ ಠಾಣೆಯಲ್ಲಿ ದಿನಾಂಕ *21.10.2019* ರಿಂದ *02.12.2020* ರವರೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನು.

ಈ ಪ್ರಕರಣದಲ್ಲಿ ದಿನಾಂಕ *20.09.2020* ರಂದು ಪಿರ್ಯಾದಿ ಸರಿತಾ ರವರು ರಾತ್ರಿ *9.45* ಗಂಟೆಗೆ ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ನೀಡಿದ್ದು ದೂರನ್ನು ಸ್ವೀಕರಿಸಿ ಠಾಣಾ ಮೊ ಸಂಖ್ಯೆ *72/2020* ಕಲಂ *302* ಐಪಿಸಿ ರೀತ್ಯ ಪ್ರಕರಣವನ್ನು ದಾಖಲಿಸಿ ಪ್ರ.ವ.ವರದಿ ಯನ್ನು ಮೇಲಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ದೂರನ್ನು ಈಗಾಗಲೇ ನಿಪಿ-*1* ಎಂದು ಗುರುತಿಸಲಾಗಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-*1(ಬಿ)* ಎಂದು ಗುರುತಿಸಲಾಯಿತು.

*20.09.2020* ರಂದು ಸಾಕ್ಷಿದಾರರ ಸಮಕ್ಷಮ ಶವ ಪಂಚನಾಮೆಯನ್ನು ರಾತ್ರಿ *11.00* ಗಂಟೆಯಿಂದ ಬೆಳಗಿನ ಜಾವ *1.30* ಗಂಟೆಯವರೆಗೆ ಮಾಡಿರುತ್ತೇನೆ. ಸದರಿ ಪಂಚನಾಮೆ ಈಗಾಗಲೇ ನಿಪಿ-*73* ಎಂದು ಗುರುತಿಸಲಾಗಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-*73(ಸಿ)* ಎಂದು ಗುರುತಿಸಲಾಯಿತು.

ನಂತರ ದಿನಾಂಕ *21.09.2020* ರಂದು ಬೆಳಗಿನ ಜಾವ *1.30* ರಿಂದ *3.00* ಗಂಟೆಯವರೆಗೆ ಪಂಚರಾದ ಸುಹಾಸ್ ಮತ್ತು ಸಂತೋಷ್ ರವರ ಸಮಕ್ಷಮ ಕೃತ್ಯ ನಡೆದ ಸ್ಥಳ ದ ಮಹಜರ್ ಮಾಡಿರುತ್ತೇನೆ ಮತ್ತು ಅಲ್ಲಿ ದೊರೆತ ಸಾಕ್ಷ್ಯಗಳನ್ನು ವಶಪಡಿಸಿಕೊಂಡಿರುತ್ತೇನೆ. ರಕ್ತಸಿಕ್ತ ನೇರಳೆ ಬಣ್ಣದ ಬಟ್ಟೆಯ ಬ್ಯಾಗ್ , ರಕ್ತಸಿಕ್ತ ವಾದ ಬೆಡ್ ಸ್ಪ್ರೆಡ್, ರಕ್ತ ಸಿಕ್ತ ವಾದ ಒಂದು ಬೆಡ್ ಶೀಟ್, ಪ್ಲಾಸ್ಟಿಕ್ ಬಾಟಲಿಯಲ್ಲಿ ಸಂಗ್ರಹಿಸಿದ ರಕ್ತ , ರಕ್ತಸಿಕ್ತವಾದ ಒಂದು ಬ್ಯಾಗ್, ರಕ್ತಸಿಕ್ತ ವಾದ ಬೆಡ್ ಸ್ಪ್ರೆಡ್, ರಕ್ತ ಮಿಶ್ರಿತ ಗೋಡೆಯ ದೂಳು, ಸಾದ ಗೋಡೆಯ ದೂಳು, ರಕ್ತಸಿಕ್ತ ವಾದ ಉಲ್ಲನ್ ಎಡಗೈ ಹ್ಯಾಂಡ್ ಗ್ಲೌಸ್ ಅನ್ನು ಅಮಾನತ್ತು ಪಡಿಸಿಕೊಂಡು ತನಿಖೆ ಮುಗಿಯುವವರೆಗೆ ನಮ್ಮ ವಶದಲ್ಲಿ ಇಟ್ಟುಕೊಳ್ಳಲು ನ್ಯಾಯಾಲಯದ ಅನುಮತಿ ಕೋರಿರುತ್ತೇನೆ. ವಶಪಡಿಸಿಕೊಂಡ ಸ್ವತ್ತಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ *75/2020* ರಂತೆ ಅಳವಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆ ಈಗಾಗಲೇ ನಿಪಿ-*2* ಎಂದು ಗುರುತಿಸಲಾಗಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-*2(ಡಿ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಎಂ.ಒ-*1* ರಿಂದ *9* ಅನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ-*59* ರವರು ನಿಪಿ-*2* ಪಂಚನಾಮೆಯನ್ನು ಕೈ ಬರವಣಿಗೆಯಲ್ಲಿ ಬರೆದಿರುತ್ತಾರೆ. ಪಂಚನಾಮೆ

ಕಾಲದಲ್ಲಿ ಚಾಸಾ-*65* ಯೋಗೇಶ್ ರವರ ಮೂಲಕ ಪೋಟೋಗಳನ್ನು ತೆಗೆಸಿರುತ್ತೇನೆ. ಸಾಕ್ಷಿದಾರರು ನಿಪಿ-*3* ರಿಂದ *25* ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಶವವನ್ನು ಚಾಸಾ-*52* ರವರ ಬೆಂಗಾವಲಿನಲ್ಲಿ ಕೆ.ಆರ್. ಆಸ್ಪತ್ರೆಯ ಶವಗಾರಕ್ಕೆ ಕಳುಹಿಸಿಕೊಟ್ಟಿದ್ದೆನು.

ದಿನಾಂಕ *21.09.2020* ರಂದು ಕೆ.ಆರ್. ಆಸ್ಪತ್ರೆಯಲ್ಲಿ ಮೃತ ಪರಶಿವಮೂರ್ತಿ ರವರ ಶವ ಪರೀಕ್ಷೆ ಮಾಡಲು ಕೋರಿ ಮನವಿ ಪತ್ರವನ್ನು ನೀಡಿ ಶವ ಪರೀಕ್ಷೆಯನ್ನು ಮಾಡಿಸಿರುತ್ತೇನೆ. ಶವ ಪರೀಕ್ಷೆ ಮುಗಿದ ನಂತರ ಮೃತರ ಹೆಂಡತಿಯಾದ ಶ್ರೀಮತಿ ಸವಿತಾರವರಿಗೆ ಮೃತ ದೇಹವನ್ನು ಹಸ್ತಾಂತರಿಸಿದ್ದೆನು. ಸಾಕ್ಷಿದಾರರು ನಿಪಿ-*26* ರಿಂದ *33* ಶವಗಾರದಲ್ಲಿ ತೆಗೆದ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

ನಂತರ ದಿನಾಂಕ *21.09.2020* ರಂದು ಚಾಸಾ-*60* ರಿಂದ *65* ರವರಿಗೆ ಜ್ಞಾಪನ ಪತ್ರ ನೀಡಿ ಆರೋಪಿತರನ್ನು ಪತ್ತೆ ಮಾಡುವ ಬಗ್ಗೆ ನೇಮಿಸಿರುತ್ತೇನೆ. ಸದರಿ ಜ್ಞಾಪನಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-*178* ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-*178* *(ಎ)* ಎಂದು ಗುರುತಿಸಲಾಯಿತು.

ದಿನಾಂಕ *22.09.2020* ರಂದು ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಿಕೊಡಲು ಮೈಸೂರು ನಗರ ಪಾಲಿಕೆ ಯವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ಕೋರಿಕೆ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-*138* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ-*138(ಎ)* ಎಂದು ಗುರುತಿಸಲಾಯಿತು.

ನಂತರ ದಿನಾಂಕ *29.09.2020* ರಂದು ಕೃತ್ಯ ನಡೆದ ಸ್ಥಳ ದ ಮೃತನ ಮನೆಯಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಎಇಇ, ಚೆಸ್ಕಾಂ ರವರಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ಸಾಕ್ಷಿದಾರರು ಮನವಿ ಪತ್ರ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*96* ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ. *96(ಎ)* ಎಂದು ಗುರುತಿಸಲಾಯಿತು.

ದಿನಾಂಕ *03.10.2020* ರಂದು ಪಿರ್ಯಾದಿ ಸವಿತಾ ರವರ ನ್ಯಾಯಾಲಯದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ *164* ಹೇಳಿಕೆಯನ್ನು ನೀಡಿರುತ್ತಾರೆ. ಸಾಕ್ಷಿದಾರರು *164* ಹೇಳಿಕೆಯನ್ನು ನೋಡಿ ಗುರುತಿಸಿದ್ದು

***(ಈ ಹಂತದಲ್ಲಿ ಚಾಸಾ-1 /ಫ್ರಾಸಾ-1 ರವರ ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ಹೇಳಿಕೆ ಕಡತದಲ್ಲಿ ಲಭ್ಯವಿಲ್ಲದ ಕಾರಣ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.)***

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು.**